ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 1, July-August 2022, Pp. 40-45.
©IIMRD, Mysuru
IIMRD JOURNALS
www.iimrd.com

# ಕಲಬುರ್ಗಿ ಜಿಲ್ಲೆ ಚಿಂಚೋಳಿ ತಾಲೂಕಿನ ಅಣವಾರ ಗ್ರಾಮದ ಮಹಿಳಾ ಸಬಲೀಕರಣದಲ್ಲಿ ಸ್ವ–ಸಹಾಯ ಸಂಘಗಳ ಪಾತ್ರ

**ಸುಜಾತ* ಮತ್ತು ಡಾ. ನೀಮ ಜ್ಞಾನದೇವ್****

*ಸಂಶೋಧನಾ ವಿದ್ಯಾರ್ಥಿನಿ, ಗ್ರಾಮೀಣಾಭಿವೃದ್ಧಿ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**ನಿರ್ದೇಶಕರು, ಗ್ರಾಮೀಣಾಭಿವೃದ್ಧಿ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**ಸಾರಾಂಶ: (Abstract)**

*ಗ್ರಾಮೀಣ ಅಭಿವೃದ್ಧಿಯು ಗ್ರಾಮದಲ್ಲಿ ವಾಸಿಸುವ ಬಡಜನರ ಸಾಮಾಜಿಕ – ಆರ್ಥಿಕ ಸ್ಥಿತಿಗತಿಯನ್ನು ತಿಳಿಸುವ ಒಂದು ನಿರ್ಣಾಯಕ ಕ್ಷೇತ್ರವೆಂದೇ ಹೇಳಲಾಗುತ್ತದೆ. ಇಂದಿಗೂ ಸಹ ಭಾರತವು ಅತೀ ಹೆಚ್ಚು ಗ್ರಾಮಗಳಿಂದ ಕೂಡಿದ್ದು ಶೇ 70% ಕ್ಕಿಂತ ಹೆಚ್ಚು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಹೀಗೆ ಗ್ರಾಮೀಣ ಅಭಿವೃದ್ಧಿ ಎಂಬ ಪರಿಕಲ್ಪನೆಯು ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಂಡಿದೆ. ಗ್ರಾಮೀಣ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಹಲವಾರು ಯೋಜನೆಗಳ ಸದುಪಯೋಗ ಪಡಿಸಿಕೊಳ್ಳುತ್ತಿದ್ದು, ಹೆಣ್ಣು ಮಕ್ಕಳ ವಿಶೇಷ ಯೋಜನೆಯಾದ ಸ್ವ–ಸಹಾಯ ಸಂಘಗಳನ್ನು ಸ್ಥಾಪಿಸಿಕೊಂಡು ಅದರ ಸದುಪಯೋಗಪಡಿಸಿಕೊಂಡು ಸಬಲೀಕರಣಗೊಳ್ಳುತ್ತಿದ್ದಾರೆ. ಪ್ರಸ್ತುತ ಅಧ್ಯಯನದಲ್ಲಿ ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲೂಕಿನ ಅಣವಾರ ಗ್ರಾಮದಲ್ಲಿನ ಮಹಿಳಾ ಸಬಲೀಕರಣದಲ್ಲಿ ಸ್ವ–ಸಹಾಯ ಸಂಘಗಳ ಪಾತ್ರವನ್ನು ವಿಶ್ಲೇಷಿಸಲಾಗಿದೆ.*

**ಮುಖ್ಯಪದಗಳು (Keywords):** ಮಹಿಳಾ ಸಬಲೀಕರಣ, ಸ್ವ–ಸಹಾಯ ಸಂಘ, ಗ್ರಾಮೀಣಾಭಿವೃದ್ಧಿ.

## ಪೀಠಿಕೆ

ಸ್ವ–ಸಹಾಯ ಸಂಘವು 10 ರಿಂದ 20 ಸ್ಥಳೀಯ ಮಹಿಳೆಯರ ಮಧ್ಯ ಪರಸ್ಪರವಾದ ಒಪ್ಪಿಗೆಯ ಮೂಲಕ ಕಿರು ಬಂಡವಾಳ ಅಥವಾ ಚಿಕ್ಕ ಮೊತ್ತದ ಬಂಡವಾಳವನ್ನು ಉಳಿತಾಯ ಮಾಡುವ ಒಂದು ವ್ಯವಸ್ಥಿತ ರೂಪವಾಗಿದೆ ಹಾಗೂ ಸ್ವಯಂಪ್ರೇರಿತವಾಗಿ ಅಧಿಕೃತ ನೊಂದಣಿರಹಿತವಾದಂತಹ ಒಂದು ಸಂಘವಾಗಿದೆ. ಸ್ವ–ಸಹಾಯ ಸಂಘಗಳು, ಒಂದು ಚಿಕ್ಕ ಮೊತ್ತದ ಬಂಡವಾಳವನ್ನು 10 ರಿಂದ 20 ಮಹಿಳಾ ಸದಸ್ಯರ ತಂಡಕ್ಕೆ ಸ್ವಯಂ ಪ್ರೇರಣೆಯಿಂದ ತಮ್ಮಲ್ಲಿಯೇ ಧನವಿನಿಯೋಗವಾಗುವಂತಹ ಅಥವಾ ತಂಡದ ಸದಸ್ಯರ ಒಪ್ಪಿಗೆಯ ಮೇರೆಗೆ ತಮ್ಮ ಹತ್ತಿರದ ಪರಿಚಯಸ್ಥರಿಗೆ ಧನ ಸಹಾಯಮಾಡಿ ಅದರಿಂದ ಬಂದ ಬಡ್ಡಿಯನ್ನು ಸಂಘದಲ್ಲಿಯೇ ಜಮೆ ಮಾಡಿ ಹೆಚ್ಚು – ಹೆಚ್ಚು ಬಂಡವಾಳವನ್ನು ತೆಗೆಯುವಂತಹ ಒಂದು ಪ್ರಕ್ರಿಯೆಯಾಗಿದೆ. ಭಾರತದಲ್ಲಿ ಹಲವಾರು ಸ್ವ–ಸಹಾಯ ಸಂಘಗಳು (SHG) ಕಿರು ಸಾಲದ ಬಿಡುಗಡೆಗಾಗಿ ಬ್ಯಾಂಕ್‌ಗಳಿಗೆ ಜೋಡಿಸಲಾಗಿದೆ.

*Please cite this article as: ಸುಜಾತ ಮತ್ತು ನೀಮ ಜ್ಞಾನದೇವ್* (2022). ಕಲಬುರ್ಗಿ ಜಿಲ್ಲೆ ಚಿಂಚೋಳಿ ತಾಲೂಕಿನ ಅಣವಾರ ಗ್ರಾಮದ ಮಹಿಳಾ ಸಬಲೀಕರಣದಲ್ಲಿ ಸ್ವ–ಸಹಾಯ ಸಂಘಗಳ ಪಾತ್ರ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(1). ಪು.ಸಂ.* 40–45.

ಸ್ವಸಹಾಯ ಸಂಘಗಳು (SHG) ಇಂದು ಗ್ರಾಮೀಣ ಮಹಿಳೆಯರ ಉದ್ಯಮಶೀಲತೆ ಬಲಪಡಿಸುವ ಹಾಗೂ ಅವರ ಅಭಿರುಚಿಗೆ ತಕ್ಕಂತಹ ಕೌಶಲ್ಯಗಳನ್ನು ಬೆಳೆಸಿ ಅವರನ್ನು ಉದ್ಯಮಶೀಲತೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತಹ ಒಂದು ಸಂಪರ್ಕ ಸೇತುವೆ/ಸಾಧನವಾಗಿ ಕಾರ್ಯ ನಿರ್ವಹಿಸುತ್ತದೆ. ಭಾರತದಲ್ಲಿ 1980ರ ದಶಕದಲ್ಲಿ ಸ್ವ–ಸಹಾಯ ಸಂಘದ ಚಟುವಟಿಕೆ ಪ್ರಾರಂಭವಾಯಿತು. ಗ್ರಾಮೀಣ ಭಾಗದಲ್ಲಿರುವಂತಹ ಬಡ ಸಮುದಾಯಗಳನ್ನು ಸಂಘಟಿಸುವುದರ ಮೂಲಕ ಸರ್ಕಾರೇತರ ಸಂಸ್ಥೆಗಳು, ಅವರಿಗೆ ಸಾಮಾಜಿಕ ಹಾಗೂ ಆರ್ಥಿಕ ಬೆಂಬಲ ನೀಡುವುದರ ಮೂಲಕ ಔಪಚಾರಿಕ ಮಾರ್ಗಗಳನ್ನು ಸೃಷ್ಟಿಸಿತು.

ಮೊಟ್ಟ ಮೊದಲು ಸ್ವ–ಸಹಾಯ ಸಂಘಗಳನ್ನು ಥೈಲ್ಯಾಂಡ್, ಫಿಲಿಪೈನ್ಸ್, ಬಾಂಗ್ಲಾದೇಶ, ಮತ್ತು ಇಂಡೋನೇಷಿಯಾದಲ್ಲಿ ಪ್ರಾರಂಭಿಸಲಾಯಿತು. ಬಾಂಗ್ಲಾ ದೇಶದಲ್ಲಿರುವಂತಹ ನಿರಾಶ್ರಿತರು ತಮ್ಮ ಆರ್ಥಿಕ ಸಬಲೀಕರಣಕ್ಕಾಗಿ 1971ರಲ್ಲಿ ಭಾರತಕ್ಕೆ ಬಂದು ನೆಲೆಸಿ ಸ್ವ–ಸಹಾಯ ಸಂಘಗಳನ್ನು ರಚಿಸಿದರು. ಮೈರಾಡ್ ಎಂಬ NGO ಗ್ರಾಮೀಣ ಅಭಿವೃದ್ಧಿ ಮಾಡುವಂತಹ ಕಾರ್ಯದಲ್ಲಿ ತೊಡಗಿದ್ದು, ಅದು 1984–85 ರಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಸಾಲ ನೀಡುವಂತಹ ಕಾರ್ಯ ಪ್ರಾರಂಭಿಸಿತು. ಹೀಗೆ NGO ಗಳ ನೇತೃತ್ವದಲ್ಲಿ 1980ರ ದಶಕದ ಮಧ್ಯಕ್ಕೆ ಪ್ರಾರಂಭಿಸಿದ ಸ್ವ–ಸಹಾಯ ಗುಂಪುಗಳು 1980ರ ಕೊನೆಗೆ ನಬಾರ್ಡ್ ಜವಾಬ್ದಾರಿ ಕೈಗೊಂಡಿತು. ಏಪ್ರಿಲ್ 1, 1999 ರಂದು ಕೇಂದ್ರ ಸರ್ಕಾರ ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ಸಹಯೋಗದಲ್ಲಿ 'ಸ್ವರ್ಣಜಯಂತಿ ರೋಜ್‌ಗಾರ್ ಯೋಜನೆ' ಜಾರಿಗೆ ಬಂದಿತು. ಹಾಗೂ ಈ ಯೋಜನೆಯಡಿ ಸ್ವ–ಸಹಾಯ ಗುಂಪುಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಯಿತು.

2000–01ರಲ್ಲಿ ಅಂದಿನ ಕರ್ನಾಟಕದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರು ಅವರ ಸರ್ಕಾರದಲ್ಲಿ ಸ್ತ್ರೀ ಸಬಲೀಕರಣಕ್ಕಾಗಿ 'ಸ್ತ್ರೀ–ಶಕ್ತಿ ಯೋಜನೆ'ಯನ್ನು ಸಹ ಜಾರಿಗೆ ತಂದರು. ಈ ಯೋಜನೆಯನ್ನು ರಾಯಚೂರಿನಲ್ಲಿ ಉದ್ಘಾಟಿಸುವ ಮೂಲಕ 'ಸ್ವ–ಸಹಾಯ ಸಂಘ'ಗಳಿಗೆ ವಿಶೇಷ ಮಾನ್ಯತೆ ನೀಡಿದರು. ಇಂದಿನ ಮಹಿಳೆಯು ತಂತ್ರಜ್ಞಾನ, ಶಿಕ್ಷಣ ಮತ್ತು ಸ್ವಾವಲಂಬನೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಿರುವ ಸಂದರ್ಭಗಳನ್ನು ನಾವು ನೊಡುತ್ತಿದ್ದೇವೆ. ವಿಶೇಷವಾಗಿ ಕೋವಿಡ್ ನಂತರದ ಯುಗದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳು ಉದ್ಯೋಗ ಮತ್ತು ಆರ್ಥಿಕ ಆದಾಯದ ನಷ್ಟವನ್ನು ಎದುರಿಸುತ್ತಿವೆ. ಇಂದು ಮಹಿಳೆಯರು ಮನೆಯ ಹಣಕಾಸಿಗೆ ಕೊಡುಗೆ ನೀಡುವ ಶಕ್ತಿ–ಸಾಮರ್ಥ್ಯವನ್ನು ಹೊಂದಿದ್ದರೂ ಸಹ, ಆದಾಯದ ಮಾರ್ಗಗಳಿಗೆ ನಿರ್ಧಾರಗಳನ್ನು ಕೈಗೊಳ್ಳುವಂತಹುದನ್ನು ಗ್ರಾಮೀಣ ಕುಟುಂಬಗಳಲ್ಲಿ ಭಾಗವಹಿಸುವಿಕೆಯ ಅವಕಾಶ ನೀಡುವುದಿಲ್ಲ.

ಅಭಿವೃದ್ಧಿ ಹೊಂದುತ್ತಿರುವ ಭಾರತ ದೇಶದಲ್ಲಿ ನಗರೀಕರಣ, ಜಾಗತೀಕರಣ, ಉದ್ಯೋಗಾವಕಾಶ ಹೀಗೆ ಕ್ಷಿಪ್ರ ಪ್ರಗತಿಯತ್ತ ಸಾಗುತ್ತಿರುವಲ್ಲಿ ಆರ್ಥಿಕತೆಯಲ್ಲಿ ಮಹಿಳಾ ಭಾಗವಹಿಸುವಿಕೆ ಎಂಬುದನ್ನು ನೋಡುವುದಾದರೆ, ನಿರ್ಣಾಯಕ ಪಾತ್ರವನ್ನು ವಹಿಸುತ್ತಿರುವುದು ಕಂಡುಬರುತ್ತದೆ. ಉದ್ಯಮಶೀಲತೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಮುದ್ರಾ ಯೋಜನೆ, ಉದ್ಯೋಗಿ ಯೋಜನೆ, ಅನ್ನಪೂರ್ಣ ಯೋಜನೆ ಮತ್ತು ಸ್ಟ್ಯಾಂಡ್ ಅಪ್ ಇಂಡಿಯಾದಂತಹ ಯೋಜನೆಗಳ ಸಮೃದ್ಧಿಯನ್ನು ಪರಿಚಯಿಸಿದೆ. ಸ್ವ–ಸಹಾಯ ಸಂಘಗಳಲ್ಲದೆ, ಇಂತಹ ಹಲವಾರು ಯೋಜನೆಗಳ ಮೂಲಕ ಭಾರತದಲ್ಲಿ ಮಹಿಳಾ

ಉದ್ಯಮಿಗಳಿಗೆ ಉತ್ತಮ ವಾತಾವರಣ ಸೃಷ್ಟಿಸಲು ಸರಕಾರ ಪ್ರಯತ್ನಿಸುತ್ತಿದೆ. ಆದಾಗ್ಯೂ ಸಹ ಹಣಕಾಸಿನ ವ್ಯವಸ್ಥೆಯ ನಿರ್ವಹಣೆಯೇ ದೊಡ್ಡ ಸವಾಲಾಗಿದೆ.

**ಚಿಂಚೋಳಿ ತಾಲೂಕಿನ ಅಣವಾರ ಗ್ರಾಮದ ಮಹಿಳಾ ಸಬಲೀಕರಣದಲ್ಲಿ ಸ್ವ–ಸಹಾಯ ಸಂಘಗಳ ಪಾತ್ರ**

ಭಾರತದಲ್ಲಿ ಪ್ರಸ್ತುತ ಬಡ ಕುಟುಂಬಗಳ ಆದಾಯವನ್ನು ಹೆಚ್ಚಿಸಲು ಸ್ವ–ಸಹಾಯ ಗುಂಪುಗಳು ಅತೀ ಹೆಚ್ಚು ಆಸಕ್ತಿದಾಯಕವಾದ ಒಂದು ಸಂಸ್ಥೆಯಾಗಿದೆ. ಕಡಿಮೆ ಶಿಕ್ಷಣ ಹೊಂದಿದ ಹೆಣ್ಣುಮಕ್ಕಳಿಗೆ ನಾಯಕತ್ವದ ಅವಕಾಶ ಒದಗಿಸುವ ವೇದಿಕೆ ಇದಾಗಿದ್ದು, ಮಹಿಳಾ ಸಬಲೀಕರಣಕ್ಕೆ ಹೆಚ್ಚು ಉತ್ತೇಜಿಸುತ್ತದೆ. 2022ರ ಆರ್ಥಿಕ ವರ್ಷದ ಮೇ ತಿಂಗಳಿನ (ಕೊನೆಯವಾರದ) ಅಂಕಿ–ಅಂಶಗಳನ್ನು ನೋಡುವುದಾದರೆ ದೇಶದ ಎಲ್ಲಾ ರಾಜ್ಯಗಳು ಸೇರಿದಂತೆ 76,14,122 ಸ್ವ–ಸಹಾಯ ಗುಂಪುಗಳಿವೆ. ಇದಕ್ಕೆ 8,29,45,306 ಸದಸ್ಯರಿದ್ದಾರೆ. ಕರ್ನಾಟಕದಲ್ಲಿ 31 ಜಿಲ್ಲೆಗಳನ್ನು ಒಳಗೊಂಡಂತೆ 2,21,798 ಸ್ವ–ಸಹಾಯ ಗುಂಪುಗಳಿವೆ. ಒಟ್ಟು 27,16,839 ಸ್ವ–ಸಹಾಯ ಗುಂಪುಗಳ ಮಹಿಳಾ ಸದಸ್ಯರಾಗಿದ್ದಾರೆ. ಕಲಬುರ್ಗಿಯನ್ನು ನೋಡುವುದಾದರೆ ಒಟ್ಟು 6855 ಸ್ವ–ಸಹಾಯ ಸಂಘಗಳಿವೆ. ಒಟ್ಟು ಜಾತಿ ಆಧಾರದ ಮೇಲೆ ನೋಡುವುದಾದರೆ ಪ.ಜಾ–26131, ಪ.ಪಂ–2216, ಅಲ್ಪಸಂಖ್ಯಾತರು–7156, ಇತರೆ 51542 ಸದಸ್ಯರಿದ್ದು ಒಟ್ಟು 87,045 ಮಹಿಳಾ ಸದಸ್ಯರಿದ್ದಾರೆ.

ಇನ್ನು ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲೂಕು ನೋಡುವುದಾದರೆ, ಒಟ್ಟು 1318 ಸ್ವ–ಸಹಾಯ ಗುಂಪುಗಳಿದ್ದು, ಪ.ಜಾ. 5679, ಪ.ಪಂ. 302, ಅಲ್ಪಸಂಖ್ಯಾತರು 1432, ಇತರೆ 8,166 ಹೀಗೆ ಒಟ್ಟು 15,579 ಸಂಘಗಳ ಸದಸ್ಯರಿದ್ದಾರೆ. ಅಣವಾರ ಗ್ರಾಮ ಪಂಚಾಯಿತಿ ಅಡಿಯಲ್ಲಿ ನೋಡುವುದಾದರೆ, ಒಟ್ಟು 20 ಸ್ವ–ಸಹಾಯ ಗುಂಪು ಗಳಿದ್ದು ಒಟ್ಟು ಸದಸ್ಯರಿದ್ದಾರೆ, ಒಟ್ಟು 236 ಜನ ಮಹಿಳಾ ಸದಸ್ಯರುಗಳಿದ್ದಾರೆ. ಅಣವಾರ ಗ್ರಾಮದಲ್ಲಿ 13 ಸ್ವ–ಸಹಾಯ ಗುಂಪುಗಳಿದ್ದು 147 ಸದಸ್ಯರಿದ್ದಾರೆ ಹಾಗೂ ಗಂಗಂಪಳ್ಳಿಯಲ್ಲಿ 7 ಸ್ವ–ಸಹಾಯ ಗುಂಪುಗಳಿದ್ದು ಒಟ್ಟು 89 ಸದಸ್ಯರಿದ್ದಾರೆ. 2020 ರಿಂದ ಇಚೇಗೆ ಆರ್ಥಿಕ ವರ್ಷದಲ್ಲಿ ಅಣವಾರ ಗ್ರಾಮ ಪಂಚಾಯಿತಿ ಅಡಿಯಲ್ಲಿ ಯಾವುದೇ ಹೊಸ ಸ್ವ–ಸಹಾಯ ಗುಂಪುಗಳ ನೊಂದಣಿಯಾಗಿರುವುದಿಲ್ಲ.

ಅಣವಾರ ಗ್ರಾಮದಲ್ಲಿ ಜಾತಿ ಆಧಾರದಲ್ಲಿ ಸ್ವಸಂಘಗಳ ಸದಸ್ಯರನ್ನು ನೊಡುವುದಾದರೆ, ಪ.ಜಾ 28, ಪ.ಪಂ. 0, ಅಲ್ಪಸಂಖ್ಯಾತರು–5, ಇತರೆ–114 ಸದಸ್ಯರಿದ್ದು ಒಟ್ಟು 147ಜನ ಮಹಿಳೆಯರು ಸ್ವ ಸಹಾಯ ಸಂಘಕ್ಕೆ ಬ್ಯಾಂಕುಗಳಲ್ಲಿ ಹೆಸರು ನೊಂದಾಯಿಸಿಕೊಂಡಿದ್ದಾರೆ. ಅಣವಾರ ಗ್ರಾಮದಲ್ಲಿ ಸ್ವಸಹಾಯ ಸಂಘಗಳು ಅತೀ ಹೆಚ್ಚು ಚುರುಕಾಗಿ ಕಾರ್ಯನಿರ್ವಹಿಸುತ್ತಿವೆ. ಅಲ್ಲಿನ ಮಹಿಳಾ ಸದಸ್ಯರು ತಮ್ಮದೇ ಆದಂತಹ ಸ್ವಂತ ನಾಯಕತ್ವದಲ್ಲಿ ಮುನ್ನಡೆಸುತ್ತಿದ್ದಾರೆ. ಅಣವಾರ ಗ್ರಾಮದಲ್ಲಿ ಬ್ಯಾಂಕಿನಲ್ಲಿ ನೊಂದಣೆಯಾಗಿರುವ ಒಟ್ಟು 14 ಸ್ವ–ಸಹಾಯ ಸಂಘಗಳಿವೆ.

1. ಕಾಮಧೇನು ಸಂಜೀವಿನಿ SHG
2. ಅನ್ನಪೂರ್ಣೆಶ್ವರಿ SHG
3. ಭಾರತಾಂಬೆ SHG

4. ಭವಾನಿ ಸ್ತ್ರೀ–ಶಕ್ತಿ SHG
5. ಭೋಗಲಿಂಗೇಶ್ವರ Self Help Group.
6. ಜೈಭವಾನಿ ಸಂಘ.
7. ಕನಕಾಂಬರಿ Self Help Group.
8. ಕಾವೇರಿ ಮಹಿಳಾ Self Help Group.
9. ಕಿತ್ತೂರು ರಾಣಿ ಚೆನ್ನಮ್ಮ SHG
10. ಮಲ್ಲಿಗೆ ಮಹಿಳಾ SHG
11. ಪ್ರಿಯದರ್ಶಿನಿ ಮಹಿಳಾ ಸ್ವಸಹಾಯ ಸಂಘ
12. ಸಾಯಿ ಕೃಪಾ ಮಹಿಳಾ ಸ್ವ–ಸಹಾಯ ಸಂಘ
13. Self- Help for Mahila.
14. ಶ್ರೀ ಜೈ ಭವಾನಿ SHG

ಅಣವಾರ ಗ್ರಾಮದಲ್ಲಿ 2 ಬ್ಲಾಕ್‌ಗಳನ್ನಾಗಿ ಮಾಡಲಾಗಿದೆ ಒಟ್ಟಾರೆಯಾಗಿ ಈ ಗ್ರಾಮದಲ್ಲಿ ಬ್ಲಾಕ್ ಆಧಾರಿತವಲ್ಲದೆ, ಬ್ಯಾಂಕಿಗೆ ನೊಂದಣೆಯಾದ 14 ಸ್ವ–ಸಹಾಯ ಸಂಘಗಳಲ್ಲದೆ, ಪ್ರತಿ ವಠಾರಗಳಲ್ಲಿಯೂ, ಸೋಮವಾರದ ಸಂಘಗಳು, ಮಂಗಳವಾರದ ಸಂಘಗಳು ಹೀಗೆ ಎಲ್ಲಾ ವಾರಗಳ ಸಂಘಗಳನ್ನು ನಡೆಸಲಾಗುತ್ತದೆ. ಅಂದರೆ ಬ್ಯಾಂಕಿಗೆ ನೊಂದಣೆಯಾಗದೇ ಕಾರ್ಯನಿರ್ವಹಿಸುತ್ತಿರುವ ಹೆಚ್ಚು–ಹೆಚ್ಚು ಸಂಘಗಳನ್ನು ಅಣವಾರ ಗ್ರಾಮದಲ್ಲಿ ನಡೆಸಲಾಗುತ್ತದೆ. ಇದರಲ್ಲಿ 10 ರಿಂದ 20 ಮಹಿಳೆಯರು. ಕಡ್ಡಾಯವಾಗಿ ಇರುತ್ತಾರೆ. ಈ ಪ್ರತಿ ಸಂಘಗಳಲ್ಲಿಯು ಒಬ್ಬ ಮಹಿಳೆ ಅಧ್ಯಕ್ಷರಾಗಿರುತ್ತಾರೆ. ಒಬ್ಬಳು ಕಾರ್ಯದರ್ಶಿ ಹಾಗೂ ಖಜಾಂಚಿಯಾಗಿರುತ್ತಾರೆ. ಹೀಗೆ ಚುರುಕುತನದಿಂದ ಸಂಘವನ್ನು ಮುನ್ನಡೆಸುತ್ತಾರೆ. 10 ರೂಪಾಯಿಂದ 500 ರೂಪಾಯಿಗಳವರೆಗಿನ ಹಣವನ್ನು ಮಹಿಳೆ ಹೂಡಿಕೆ ಮಾಡುವುದರ ಮೂಲಕ ಆ ದುಡ್ಡನ್ನು ಇತರರಿಗೆ ಸಾಲ ನೀಡುತ್ತಾರೆ ಸಂಘ ಸಾಲದಿಂದ ಪ್ರಧಾನವಾಗಿ ಬಡ ರೈತರಿಗೆ, ವ್ಯಾಪಾರಸ್ಥರಿಗೆ ಇನ್ನಿತರ ಬಡ ಕಾರ್ಮಿಕರಿಗೆ, ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಕೊಡುತ್ತಾರೆ. ಈ ರೀತಿಯಾಗಿ ಸ್ವ–ಸಂಘಗಳು ಸಹಾಯ ಹಸ್ತ ನೀಡುತ್ತವೆ. 500 ರೂಪಾಯಿಗಿಂತ ಹೆಚ್ಚಿನ ಬಂಡವಾಳ ಹೂಡಿಕೆಯ ಸಂಘಗಳು ಅತೀ ಕಡಿಮೆ ಕಾಣಸಿಗುತ್ತವೆ. ಬಡ್ಡಿಯಿಂದ ಬಂದ ಹಣವನ್ನು ಸಂಘದ ಮಹಿಳಾ ಸದಸ್ಯರೆಲ್ಲರೂ ಸರಿಸಮಾನವಾಗಿ ಹಂಚಿಕೊಳ್ಳುತ್ತಾರೆ. ಯಾವುದೇ ತಕರಾರಿಲ್ಲದೇ ಸಂಘಗಳನ್ನು ವ್ಯವಹರಿಸುತ್ತಾರೆ.

ಅಲ್ಲಿನ ಮಹಿಳೆಯರು ಸಂಘಗಳಲ್ಲಿ ಹಣ ಹೂಡಿಕೆ ಮಾಡುವುದರ ಮೂಲಕ ತಮ್ಮ ವೈಯಕ್ತಿಕ ಆದಾಯವನ್ನು ಗಳಿಸುವುದರಲ್ಲಿ ಯಶಸ್ವಿಯಾಗುತ್ತಿದ್ದಾರೆ. ಬಂದ ಹಣದಿಂದ ಮಕ್ಕಳ ಶಿಕ್ಷಣ, ವಿವಾಹ ಕಾರ್ಯಕ್ರಮಗಳು, ಅನಾರೋಗ್ಯ, ರಸಗೊಬ್ಬರ, ಹೈನುಗಾರಿಕೆ ಮಾಡುವುದು, ಟೈಲರಿಂಗ್ ಮೆಷಿನ್ ಕೊಳ್ಳುವುದು, ಟ್ರ್ಯಾಕ್ಟರ್‌ಗೆ ಸಂಬಂಧಿಸಿದ ಮೆಷಿನ್ ಕೊಳ್ಳುವುದು, ಹಪ್ಪಳ ತಯಾರಿಕೆ ಮತ್ತು ಮಾರಾಟ, ರೊಟ್ಟಿ ತಯಾರಿಕೆ ಮತ್ತು ಮಾರಾಟ, ಬಟ್ಟೆ ಕೊಳ್ಳುವುದು ಹೀಗೆ ಹತ್ತು ಹಲವಾರು ಕೆಲಸಗಳಿಗೆ ಸದುಪಯೋಗ ಮಾಡಿಕೊಳ್ಳುತ್ತಿದ್ದಾರೆ.

**ಅಧ್ಯಯನಕ್ಕೆ ಸಂಬಂಧಿಸಿದ ಸಲಹೆಗಳು**

- ಸ್ವ–ಸಹಾಯ ಸಂಘಗಳಲ್ಲಿ ಸದಸ್ಯತ್ವ ಹೆಚ್ಚುವಂತೆ ಮಾಡಬೇಕು ಈ ಸಂಘಗಳು ಬ್ಯಾಂಕಿನಲ್ಲಿ ನೊಂದಣಿ ಮಾಡಿಸುವುದು ಹೆಚ್ಚು ಒತ್ತು ನೀಡಬೇಕು.
- ಸ್ವ–ಸಹಾಯ ಸಂಘಗಳ ಬಗ್ಗೆ ಹಳ್ಳಿಗಳಲ್ಲಿ ಹೆಚ್ಚು ಅರಿವು ಮೂಡಿಸಬೇಕು. ಮತ್ತು ಅದರಿಂದಾಗುವ ಸಹಾಯದ ಬಗ್ಗೆ ತಿಳಿವಳಿಕೆ ಮೂಡಿಸಬೇಕು.
- ಸ್ವ–ಸಹಾಯ ಸಂಘಗಳಲ್ಲಿರುವ ಮಹಿಳೆಯರನ್ನು ಸರ್ಕಾರದ ಹಲವಾರು ಸಂಬಂಧಪಟ್ಟ ಯೋಜನೆಗಳಿಗೆ ಹಾಗೂ ಕಾರ್ಯಕ್ರಮಗಳಿಗೆ ಇವರಿಗೆ ನೇಮಿಸಬೇಕು.
- ಸ್ವ–ಸಹಾಯ ಸಂಘಗಳಲ್ಲಿರುವ ಸದಸ್ಯರಿಗೆ ಸರ್ಕಾರದಿಂದ ಸೂಕ್ತ ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.
- ಸ್ವ–ಸಹಾಯ ಸಂಘದ ಸದಸ್ಯರು ತಯಾರಿಸುವ ಉತ್ಪನ್ನಗಳಿಗೆ ಸರ್ಕಾರದಿಂದ ಸೂಕ್ತ ಬೆಲೆ ಸಿಗುವಂತಾಗಬೇಕು ಹಾಗೂ ಅವರಿಗೆ ಉತ್ಪನ್ನಗಳನ್ನು ತಯಾರಿಸಲು ಬಡ್ಡಿರಹಿತ ಸಾಲ ಸೌಲಭ್ಯವನ್ನು ಸಂಘಕ್ಕೆ ಸರ್ಕಾರ ನೀಡುವಂತಾಗಬೇಕು.

**ಉಪಸಂಹಾರ**

ಗ್ರಾಮಗಳಲ್ಲಿ ಇಂದು ಮಹಿಳೆಯರು ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಸಬಲೀಕರಣದ ಕ್ಷೇತ್ರದಲ್ಲಿ ಯಶಸ್ಸುಗಳಿಸುತ್ತಿದ್ದಾರೆ. ಇದೆಲ್ಲದನ್ನು ಸಾಧಿಸಲು ಸ್ವ–ಸಹಾಯ ಸಂಘಗಳು ಗ್ರಾಮೀಣ ಭಾಗಗಳಲ್ಲಿ ಉತ್ತಮ ಕಾರ್ಯ ನಿರ್ವಾಹಕ ಸಾಧನದಂತೆ ಕಾರ್ಯಗತಗೊಂಡಿದೆ. ಸ್ವ–ಸಹಾಯ ಸಂಘಗಳಲ್ಲಿ ಅಲ್ಪ ಬಂಡವಾಳದ ಉಳಿತಾಯದ ಮೂಲಕ ಆದಾಯ ಮೂಲದ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಆರ್ಥಿಕವಾಗಿ ಅಭಿವೃದ್ಧಿ ಹೆಚ್ಚುತ್ತಿದೆ. ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು, ಸ್ವ–ಸಹಾಯ ಸಂಘಗಳಿಗೆ ಬೇಕಾದ ಹಣಕಾಸಿನ ಸೌಲಭ್ಯವನ್ನು ನೀಡುವುದರ ಮೂಲಕ ಸಂಘಗಳನ್ನು ಸದೃಢಗೊಳಿಸಲು ಸಾಧ್ಯವಾಗುತ್ತದೆ. ಹೆಚ್ಚಾಗಿ ಮಹಿಳೆಯು ಈ ಸಂಘಗಳನ್ನು ಮೂಲಕ ತನ್ನ ಇಡೀ ಕುಟುಂಬ ನಿರ್ವಹಣೆ ಮಾಡುವಲ್ಲಿ ಯಶಸ್ವಿಯಾಗುತ್ತಿದ್ದಾಳೆ ಹಾಗೂ ತನ್ನ ಕೌಟುಂಬಿಕ ನಿರ್ಧಾರವನ್ನು ಜವಾಬ್ದಾರಿಯನ್ನು ತೆಗೆದುಕೊಳ್ಳುವಲ್ಲಿ ವಿಶ್ವಾಸನೀಯ ಪಾತ್ರವಹಿಸುತ್ತಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ರವಿಕುಮಾರ ಎಂ.ಎ. ಮತ್ತು ಯಶೋಧ ಎಸ್. (2008). ಗ್ರಾಮೀಣಾಭಿವೃದ್ಧಿ ಮತ್ತು ವೀಕೇಂದ್ರಿಕರಣ: ಆದಿವಾಸಿ ಮಹಿಳೆಯರ ಸಬಲೀಕರಣದಲ್ಲಿ ಸ್ವ–ಸಹಾಯ ಸಂಘದ ಪಾತ್ರ ಪು.ಸಂ. (81,99)
- ಸ್ವ–ಸಹಾಯ ಸಂಘಗಳ ಪ್ರತಿನಿಧಿಗಳಿಗೆ ಉಪಗ್ರಹ ಆಧಾರಿತ ತರಬೇತಿ ಕೈಪಿಡಿ. (2008) ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು.

- Nagesha B, Ajeya G. Role of self help crops in Rural Development – A Study. open Access Journal.
- Jatin Pandey’ and Pini Roberts. (Study on Empowerment of Rural Women Through Self Help, ABHINAV – National Journal of Research in Commerce and Management – www.abhinavjournal.com.
- Handbook on Forming Self Help Groups (SHGs). National Bank for Agriculture and Rural Development.
- www.nrlm.gov.in
- www.aajeevika.gov.in